**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ರಮೇಶ್ ಬಾಬು, ಇವರು ನಿಯಮ 330ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ**

******

**ಸೂಚನೆ:-**

"ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯು 1994 ರ ಅಧಿನಿಯಮದ ಮೂಲಕ ರಚಿಸಲಾಗಿದ್ದು, ಕ್ಷಾಮಪೀಡಿತ ಹಾಗೂ ಹಿಂದುಳಿದ ತಾಲ್ಲೂಕುಗಳನ್ನು ಗುರುತಿಸಿ ಇದರ ವ್ಯಾಪ್ತಿಗೆ ತರಲಾಗಿದ್ದು, ಇದರ ಉದ್ದೇಶ ಮತ್ತು ಯೋಜನೆಗಳನ್ನು ಜಾರಿಗೊಳಿಸಲು ಮಂಡಳಿಯನ್ನು ರಚಿಸಲಾಗಿದ್ದು, ಅನುಷ್ಠಾನ ಸಮಿತಿಯನ್ನೂ ರಚಿಸಲಾಗಿದೆ. ಮಂಡಳಿಯ ಕಾರ್ಯದರ್ಶಿಗೆ ಉದ್ದೇಶಗಳನ್ನು ಜಾರಿಗೊಳಿಸಲು ಅಧಿಕಾರ ನೀಡಲಾಗಿದೆ. ಕಳೆದ 5 ವರ್ಷಗಳಲ್ಲಿ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯು ವಿವೇಚನಾ ಕೋಟಾದ ಅಡಿ ನಿಯಮಗಳನ್ನು ಉಲ್ಲಂಘಿಸಿ ಹಲವಾರು ಕೋಟಿ ರೂಪಾಯಿಗಳ ಕಾಮಗಾರಿಗಳನ್ನು ಕೈಗೊಂಡಿರುತ್ತದೆ. ಮಂಡಳಿಯ ನಿಗದಿತ ಸಭೆಯನ್ನು ನಡೆಸದೆ, ನಿಯಮಗಳನ್ನು ಪಾಲಿಸದೆ, ಕ್ರಿಯಾ ಯೋಜನೆಗೆ ಅನುಮತಿ ಪಡೆಯದೆ, ಮಂಡಳಿಯ ವ್ಯಾಪ್ತಿಯ ಶಾಸಕರಿಗೆ ಅನುದಾನಗಳನ್ನು ನೀಡದೇ ವಿವೇಚನಾ ಕೋಟದ ಅಡಿಯಲ್ಲಿ ನೂರಾರು ಕೋಟಿ ರೂಪಾಯಿಗಳ ಕಾಮಗಾರಿಗಳನ್ನು ನಡೆಸಲಾಗಿರುತ್ತದೆ. ಮುಂದುವರೆದ ಕಾಮಗಾರಿಗಳ ಹೆಸರಿನಲ್ಲಿ, ಸರ್ಕಾರದ ವಿವೇಚನಾ ಕೋಟಾದ ಕಾಮಗಾರಿಗಳ ಹೆಸರಿನಲ್ಲಿ ಲೆಕ್ಕಶೀರ್ಷಿಕೆ 2515 ಮತ್ತು 4515 ರ ಅಡಿಯಲ್ಲಿ, ತಿದ್ದುಪಡಿ ಆದೇಶದ ಹೆಸರಿನಲ್ಲಿ ಅನುದಾನಗಳನ್ನು ಬಳಕೆ ಮಾಡಲಾಗಿರುತ್ತದೆ. ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಕಾಮಗಾರಿಗಳ ಹೆಸರಿನಲ್ಲಿ ನಡೆದಿರುವ ಈ ಲೋಪಗಳ ಕುರಿತು ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖಾ ಸಚಿವರಲ್ಲಿ ಪ್ರಸ್ತಾಪಿಸಲು ಕೋರುತ್ತೇನೆ".

**ಉತ್ತರ:-**

ರಾಜ್ಯ ಸರ್ಕಾರವು ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯನ್ನು ಅಧಿನಿಯಮ 1994 ರ ಮೂಲಕ ರಚಿಸಿ 1996 ರ ನಿಯಮಗಳ ಮೂಲಕ ಕಾರ್ಯ್ಯೆಯಲ್ಲಿ ನಮೂದಾಗಿರುವ ವಿಷಯಗಳನ್ನು ನಿರ್ವಹಣೆ ಮಾಡುತ್ತಿದೆ. ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ನಿಗಧಿಪಡಿಸಿದ ಅನುದಾನಕ್ಕೆ ಅನುಗುಣವಾಗಿ, ಮಂಡಳಿಯ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಕ್ರಿಯಾಯೋಜನೆಯನ್ನು ರೂಪಿಸಿ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆದು ಅನುಷ್ಠಾನಗೊಳಿಸಲಾಗುತ್ತಿದೆ.

**ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಕಳೆದ 5 ವರ್ಷಗಳಲ್ಲಿ ಈ ಕೆಳಕಂಡಂತೆ ಅನುದಾನ ನಿಗಧಿಯಾಗಿರುತ್ತದೆ.**

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ವರ್ಷ | ಆಯವ್ಯಯದಲ್ಲಿ ನಿಗಧಿಯಾದ ಅನುದಾನ | ಸಾಮಾನ್ಯ ಯೋಜನೆ | ವಿಶೇಷ ಘಟಕ ಯೋಜನೆ | ಗಿರಿಜನ ಉಪ ಯೋಜನೆ |
|---|---|---|---|---|---|
| 1 | 2020-21 | 2211.00 | 1672.00 | 383.00 | 156.00 |
| 2 | 2021-22 | 5000.00 | 4269.00 | 519.00 | 212.00 |
| 3 | 2022-23 | 15300.00 | 14215.50 | 771.75 | 312.75 |
| 4 | 2023-24 | 3950.00 | 2998.05 | 677.43 | 274.52 |
| 5 | 2024-25 | 3950.00 | 2998.05 | 677.43 | 274.52 |
| 6 | 2025-26 | 3950.00 | 2998.05 | 677.43 | 274.52 |
| | **ಒಟ್ಟು** | **34361.00** | **9150.70** | **3706.04** | **1504.31** |

ಕಳೆದ 5 ವರ್ಷಗಳಲ್ಲಿ ನಿಗಧಿಯಾಗಿರುವ ಅನುದಾನದಲ್ಲಿ ಕ್ರಿಯಾಯೋಜನೆ ರೂಪಿಸಿ ಎಲ್ಲಾ ಶಾಸಕರುಗಳಿಂದ ನಿಗಧಿತ ಅನುದಾನಕ್ಕೆ ಕಾಮಗಾರಿಗಳ ವಿವರ ಪಡೆದು ಅನುಷ್ಠಾನಗೊಳಿಸಲಾಗುತ್ತಿದೆ.

2022-23ನೇ ಸಾಲಿನಲ್ಲಿ ಪ್ರತಿ ಕ್ಷೇತ್ರಕ್ಕೆ ತಲಾ ರೂ.100.00 ಲಕ್ಷಗಳಂತೆ, 2023-24ನೇ, 2024-25ನೇ ಹಾಗೂ 2025-26ನೇ ಸಾಲಿನಲ್ಲಿ ಪ್ರತಿ ಕ್ಷೇತ್ರಕ್ಕೆ ತಲಾ ರೂ.35.00 ಲಕ್ಷಗಳಂತೆ ಹಂಚಿಕೆ ಮಾಡಿ ಕಾಮಗಾರಿಗಳ ವಿವರ ಪಡೆದು ಅನುಷ್ಠಾನಗೊಳಿಸಲಾಗುತ್ತಿದೆ.

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ನಿಗಧಿಯಾಗಿರುವ ಅನುದಾನದಲ್ಲಿ ಸರ್ಕಾರದ ವಿವೇಚನಾ ನಿಧಿಗೆ ಶೇ.5% ರಷ್ಟು ಅಧ್ಯಕ್ಷರ ವಿವೇಚನಾ ನಿಧಿಗೆ ಶೇ.5% ರಷ್ಟು ಅನುದಾನವನ್ನು ನಿಗಧಿಪಡಿಸಿ ಸಂಬಂಧಪಟ್ಟವರಿಂದ ಕಾಮಗಾರಿ ವಿವರ ಪಡೆದು ಅನುಷ್ಠಾನ ಮಾಡಲಾಗುತ್ತಿದೆ.

ಕಳೆದ 5 ವರ್ಷಗಳಲ್ಲಿ ಸರ್ಕಾರದ ವಿವೇಚನಾ ನಿಧಿ ಮತ್ತು ಅಧ್ಯಕ್ಷರ ವಿವೇಚನಾ ನಿಧಿಗೆ ನಿಗಧಿಪಡಿಸಿದ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ.

**(ರೂ.ಲಕ್ಷಗಳಲ್ಲಿ)**

| **ಕ್ರ. ಸಂ** | **ವರ್ಷ** | **ನಿಗಧಿತ ಒಟ್ಟು ಅನುದಾನ** | **ಸರ್ಕಾರದ ವಿವೇಚನಾ ನಿಧಿ (ಶೇ.5% ರಷ್ಟು)** | **ಅಧ್ಯಕ್ಷರ ವಿವೇಚನಾ ನಿಧಿ (ಶೇ.5% ರಷ್ಟು)** | **ಷರಾ** |
|---|---|---|---|---|---|
| 1 | 2020-21 | 2211.00 | 110.55 | 110.55 | 2025-26ನೇ ಸಾಲಿನಲ್ಲಿ ಸರ್ಕಾರದ ವಿವೇಚನಾ ನಿಧಿಗೆ ಶೇ.10 ರಷ್ಟು ಅಂದರೆ ರೂ.395.00 ಲಕ್ಷಗಳನ್ನು ನಿಗಧಿಪಡಿಸಲಾಗಿದೆ. |
| 2 | 2021-22 | 5000.00 | 255.00 | 255.00 | |
| 3 | 2022-23 | 15300.00 | 765.00 | 765.00 | |
| 4 | 2023-24 | 3950.00 | 197.50 | 197.50 | |
| 5 | 2024-25 | 3950.00 | 197.50 | 197.50 | |
| 6 | 2025-26 | 3950.00 | 395.00 | 197.50 | |
| **ಒಟ್ಟು** | | **34361.00** | **1920.55** | **1723.05** | |

ಮೇಲ್ಕಂಡಂತೆ ವಿವೇಚನಾ ಕೋಟಾದಲ್ಲಿ ಅನುದಾನವನ್ನು ವೆಚ್ಚ ಮಾಡಲಾಗಿದ್ದು, ಯಾವುದೇ ಲೋಪಗಳು ನಡೆದಿರುವುದಿಲ್ಲ ಎಂದು ಈ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**(ಸಂಖ್ಯೆ: ಪಿಡಿಎಸ್ 20 ಪಿಟಿಪಿ 2026)**

**(ಡಿ.ಸುಧಾಕರ್)**
ಯೋಜನೆ,ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಸಚಿವರು.